

ಎಡದಿಂದ ಬಲಕ್ಕೆ:
1. ಅವನ ಕೆಲಸ, ಸ್ವಲ್ಪವೂ ಶ್ರಮ ಇಲ್ಲ (4)
3. ದೇವನಲ್ಲಿ ಏನನ್ನೋ ಬದಲಿಸಿಹೋಗಿ ರಾಕ್ಷಸನಾದನಲ್ಲ! (3)
4. ಶಹರವನ್ನು ತಲುಪಿದೊಡನೆಯೇ ಸಂತಸವೇ? (3)
6. ನೀರನ್ನೇಕೆ ತರಲಿಲ್ಲ ಕೇಳಿದ್ದಕ್ಕೆ ಮರುಮಾತೇ ಇಲ್ಲ (4)
7. ಅಣ್ಣನ ಮಾತಿನಲ್ಲೇ ಆಜ್ಞೆ (3)
9. ಆ ಪರಿಕರದ ಬೆಳಕು ತುಂಬ ತೀಕ್ಷ್ಣ (3)
11. ಅಲ್ಲಿನ ನಿಯಮಗಳ ಒಂದು ಜೋಡಿ ಇಲ್ಲಿದೆ (3)
13. ಅಧ್ಯಕ್ಷತೆ ವಹಿಸಲು ಅವಶ್ಯವಾದ ಸಾಮರ್ಥ್ಯ ಗೊತ್ತೇ? (3)
15. ಅಂತಹದನ್ನೆಲ್ಲ ಪ್ರಶ್ನಿಸಹೋದೊಡನೆ ಮಾಯ! (4)
17. ತವರಿನಿಂದ ತಂದದ್ದು– ಬೇಗ ಬೇಗ (3)
18. ಮೇರು ಕವಿಯ ಸ್ಥಿತಿ ಕಂಡಾಗಿನ ಭಾವನೆ– ಅಯ್ಯೋ ಪಾಪ! (3)
19. ಧೀರಜನಿಗೆ ಇಂದು ಪೂರ್ತಿ ಬಿಡುವು (4)

ಮೇಲಿಂದ ಕೆಳಕ್ಕೆ:
1. ಅವನಿಗೇನೇ ಇರಲಿ, ಇದೊಂದೇ ಎಲ್ಲರ ಭೂಮಿ (3)
2. ಸಹಚರರ ಸಾಹಸಕ್ಕೆ ಅತಿ ವಿಸ್ತಾರ ಮರುಭೂಮಿ (3)
3. ದೇವರ ಹಣ ಕದ್ದವನ ಪರಿಸ್ಥಿತಿ ಎಷ್ಟು ಕಠಿಣ ನೋಡಿ (3)
5. ಕ್ಷಣ ಕ್ಷಣಕ್ಕೂ ನೆನಪಾಗುವ 'ಆರುವದನ' (3)
7. ಬಾಲ್ಯದಿಂದಲೂ ಆತ ಬಾಳಿದ್ದು ಇದೇ ಮನೆ (3)
8. ತೋರಿಕೆಗಷ್ಟೇ ಆತ ಅಲೆಮಾರಿ ಗೊತ್ತೇ? (3)
9. ಪರಿಸರದ ಒಳಿತಿಗೆ ಹಂಚಿದ ದೇವಾರ್ಪಿತ ವಸ್ತು (3)
10. ರಕ್ಷಣಾ ಖಾತೆ ವಹಿಸಿಕೊಂಡಾಕೆ ಅಪಾಯ ಮುಕ್ತೆ (3)
12. ಹನುಮಂತನ ಪಾತ್ರಕ್ಕೆ ತುಂಬ ಶ್ರೇಷ್ಠತೆ (3)
14. ಕ್ಷೀಣ ದನಿ ಕೇಳಿಸಿದ್ದು ಅತ್ಯಲ್ಪ ಅವಧಿಯದು (3)
15. ಅವಾಂತರಕ್ಕೆ ಕಾರಣವಾದದ್ದು ಅದೇ ವ್ಯತ್ಯಾಸ (3)
16. ನಮ್ಮನ್ನೆಲ್ಲ ಸಲಹಿದವರಿಗೆ ವಂದನೆ (3)

## ಪದಬಂಧ : 19-11-2009ರ ಉತ್ತರಗಳು

ಎಡದಿಂದ ಬಲಕ್ಕೆ: 1. ಸಮರ್ಪಕ; 3. ಸನ್ನಾಹ; 4. ಹಳತು; 6. ತಳಹದಿ; 8. ಬಲವಂತ; 10. ತಿರೋಧಾನ; 12. ರಹದಾರಿ; 16. ಸುಭಿಕ್ಷ; 17. ಲವಣ; 18. ತ್ರಯೋದಶ.

ಮೇಲಿಂದ ಕೆಳಕ್ಕೆ: 1. ಸಹಸ್ರ; 2. ಕಹಳೆ; 3. ಸನಿಹ; 5. ತುಮುಲ; 6. ತರಗತಿ; 7. ದಿಟ್ಟತನ; 8. ಬಡಿವಾರ; 9. ತರಕಾರಿ; 11. ಧಾವಿಸು; 13. ಹರಣ; 14. ನಕ್ಷತ್ರ; 15. ಕಲಶ.

# ನಿಸರ್ಗ ಸೋಜಿಗ

## 'ದೆವ್ವದ ಗೋಪುರ'– ಅದೇನು?

ದೆವ್ವದ ಗೋಪುರ (ಡೆವಿಲ್ಸ್ ಟವರ್)– ಅದು ಅತಿ ವಿಸ್ಮಯದ ಒಂದು ನೈಸರ್ಗಿಕ ಶಿಲ್ಪ. ಅದರಷ್ಟು ವಿಚಿತ್ರ ರೂಪದ, ವಿಲಕ್ಷಣ ಸ್ವರೂಪದ, ಒಂಟಿತನದ, ಬೃಹದಾಕಾರದ ಏಕಶಿಲಾ ನಿರ್ಮಿತಿ ಇಡೀ ಧರೆಯಲ್ಲಿ ಬೇರೆ ಇನ್ನೊಂದೂ ಇಲ್ಲ. ಯು.ಎಸ್‌ಎ.ಯ ವ್ಯೋಮಿಂಗ್ ಪ್ರಾಂತ್ಯದಲ್ಲಿ, ವಿಸ್ತಾರ ಹುಲ್ಲು ಬಯಲಲ್ಲಿ ಏಕಾಂಗಿಯಾಗಿ ಮುಗಿಲೆತ್ತರಕ್ಕೆ ನಿಂತಿರುವ ಈ ಬೃಹತ್ ಬಂಡೆಗೆ ಅದರ ಇಂಥ ವೈಲಕ್ಷಣ್ಯಗಳಿಂದಾಗಿಯೇ 'ದೆವ್ವದ ಗೋಪುರ' ಎಂದು ಹೆಸರು. ಈ ಗೋಪುರದ ಶಿರದಲ್ಲಿ 'ಕೆಟ್ಟ ದೇವರುಗಳು' ನೆಲೆಸಿದ್ದಾರೆಂದು ನಂಬಿದ್ದ ಅಲ್ಲಿನ ಪುರಾತನ ಜನರ ಗಾಢ ಮೂಢನಂಬಿಕೆ ಈ ಹೆಸರಿನ ವಾಸ್ತವಿಕ ಮೂಲ. ಡೆವಿಲ್ಸ್ ಟವರ್‌ನ ನಿರ್ಜನ ನೆಲೆ ಮತ್ತು ರೂಪ ವೈಚಿತ್ರ್ಯ ಅನ್ಯಲೋಕ ಸದೃಶ. ಹಾಗಾದ್ದರಿಂದಲೇ ಜಗತ್ಪ್ರಸಿದ್ಧ ಚಲನಚಿತ್ರ 'ಕ್ಲೋಸ್ ಎನ್ ಕೌಂಟರ್ಸ್ ಆಫ್ ದಿ ಥರ್ಡ್ ಕೈಂಡ್'ನಲ್ಲಿ ಅನ್ಯಲೋಕದ ಜೀವಿಗಳು ಭೂಮಿಗೆ ಬಂದಿಳಿದಿದ್ದು ಇಲ್ಲೇ. ಆ ಮೂಲಕ ಜಗದ್ವಿಖ್ಯಾತವಾದ ಡೆವಿಲ್ಸ್ ಟವರ್ ಅಮೆರಿಕದ ಪ್ರಥಮ ನೈಸರ್ಗಿಕ ರಾಷ್ಟ್ರೀಯ ಸ್ಮಾರಕ ಕೂಡ.

ಭಾರೀ ವಿಸ್ತಾರದ ಮಟ್ಟಸ ಮೈದಾನ ಪ್ರದೇಶದಲ್ಲಿ, ವೃಕ್ಷಾಚ್ಛಾದಿತ ಮಣ್ಣುದಿಬ್ಬವೊಂದರ ಮೇಲೆ ನೇರ ನಿಂತಿರುವ ದೆವ್ವದ ಗೋಪುರದ ಎತ್ತರ ಎಂಟುನೂರ ಅರವತ್ತೈದು ಅಡಿ. ಬುಡದಲ್ಲಿ ಅದರ ಅಡ್ಡಳತೆ ಒಂದು ಸಾವಿರ ಅಡಿ; ಕ್ರಮೇಣ ಕಡಿಮೆಯಾಗುತ್ತ ಶಿಖರದಲ್ಲಿ ಇನ್ನೂರ ಎಪ್ಪತ್ತೈದು ಅಡಿ. ಇಂಥ ಗಾತ್ರ. ಎತ್ತರಗಳಿಂದಾಗಿಯೇ ಸುತ್ತ ಒಂದು ನೂರ ಅರವತ್ತು ಕಿಲೋ ಮೀಟರ್ ದೂರದಿಂದಲೇ ಈ ಗೋಪುರ ಸ್ಪಷ್ಟ ಗೋಚರ.

ದೆವ್ವದ ಗೋಪುರ ನವೀನ ನಿರ್ಮಿತಿ ಏನಲ್ಲ. ಅದು ಮೈದಳೆದದ್ದು ಈಗ್ಗೆ ಐದು ಕೋಟಿ ವರ್ಷ ಹಿಂದೆ. ಆ ಕಾಲದಲ್ಲಿ ಆ ಪ್ರದೇಶದಲ್ಲಿ ಅಲ್ಲಿನ



ನೆಲದೊಳಗಿನ ಭಾರೀ ಟೊಳ್ಳೊಂದರೊಳಕ್ಕೆ ಭೂ ಅಂತರ್ಯದಿಂದ ನುಗ್ಗಿಬಂದ ಶಿಲಾಪಾಕ ತುಂಬಿಕೊಂಡಿತ್ತು. 'ಬಸಾಲ್ಟ್' ಶಿಲೆಯ ಆ ಪಾಕ ಕ್ರಮೇಣ ತಣ್ಣಗಾಗಿ ಅದರ ಸಹಜ ಸ್ವಭಾವದಿಂದಾಗಿ ಸ್ತಂಭಗಳು ಜೋಡಣೆಗೊಂಡಂತೆ ಕಾಣುವ ಏಕ ಶಿಲಾ ಆಕೃತಿಯಾಯಿತು. ಮೂಲತಃ ನೆಲದೊಳಗೇ ಇದ್ದ ಈ ಗೋಪುರದ ಸುತ್ತಲ ಮೈದಾನದ ನೆಲದ ಮೃದುಶಿಲೆಗಳು ಮಣ್ಣು ಇತ್ಯಾದಿ ದ್ರವ್ಯಗಳೆಲ್ಲ ಶಿಥಿಲೀಕರಣಗೊಳ್ಳುತ್ತ ಕೋಟ್ಯಂತರ ವರ್ಷಗಳಲ್ಲಿ ಕೊಚ್ಚಿಹೋದಾಗ ದೃಢವಾದ ಏಕಶಿಲೆಯ ದೆವ್ವದ ಗೋಪುರ ನೆಲದ ಹೊರಗೆ ಗೋಚರಗೊಂಡು ಈಗಲೂ ಹಾಗೆಯೇ ಇದೆ.

ಪ್ರಸ್ತುತ ಪ್ರವಾಸಿಗಳಿಗಷ್ಟೇ ಅಲ್ಲದೆ ಸಾಹಸಿಗಳಿಗೂ ಡೆವಿಲ್ಸ್ ಟವರ್ ಒಂದು ಆಕರ್ಷಣೆಯಾಗಿದೆ. ಈ ಗೋಪುರವನ್ನು ಹತ್ತಿ ಇಳಿದಿರುವ ಸಾಹಸಿಗಳಿದ್ದಾರೆ. ಅವರೆಲ್ಲ ಒಂದು ಸತ್ಯವನ್ನು ನೇರ ಕಂಡಿದ್ದಾರೆ: "ದೆವ್ವ ಇರುವುದು ಈ ಗೋಪುರದಲ್ಲಲ್ಲ; ಅದರ ಹೆಸರಲ್ಲಿ ಮಾತ್ರ!"

■ ಎನ್. ವಾಸುದೇವ್